# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. :29 ಪ್ರಾ.ಸಾ. :31**

| | | |
|---|---|---|
| ಸಾಕ್ಷಿಯ ಹೆಸರು | : | ಶಶಿಕುಮಾರ ಸಿ. ಆರ್. |
| ತಂದೆಯ ಹೆಸರು | : | ಕೆ. ರಾಮಯ್ಯ |
| ವಯಸ್ಸು | : | 43 ವರ್ಷ |
| ಕೆಲಸ | : | ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು |
| ವಾಸ | : | ಮೈಸೂರು |

**ದಿನಾಂಕಃ 25-02-2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ನವೆಂಬರ್ 2019 ರಿಂದ ಆಗಸ್ಟ್ 2022 ರವರೆಗೆ ನಾನು ಕುಮಟಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತ್ಯವ್ಯ ನಿರ್ವಹಿಸಿರುತ್ತೇನೆ. ದಿ.03-05-2021 ರಂದು ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-39 ರವರು ನನಗೆ ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ತಂದು ಹಾಜರುಪಡಿಸುವಂತೆ ಜ್ಞಾಪನ ನೀಡಿದ್ದು, ಅದರಂತೆ ನಾನು ನಮ್ಮ ಸಿಬ್ಬಂದಿಯೊಂದಿಗೆ ಆರೋಪಿಯ ಪತ್ತೆಕಾರ್ಯಕ್ಕೆ ತೆರಳಿ, ಅದೇ ದಿನ ಸಂಜೆ 7.00 ಗಂಟೆಗೆ ಆರೋಪಿಯನ್ನು ಚಂದಾವರದ ಸುಲ್ತಾನಿ ಮಸೀದಿಯ ಬಳಿಯ ಅರಣ್ಯ ಪ್ರದೇಶದಲ್ಲಿ ಪತ್ತೆ ಮಾಡಿ, ಕರೆದುಕೊಂಡು ಬಂದು ರಾತ್ರಿ 10.00 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ ಹಾಗೂ ಈ ಬಗ್ಗೆ ವರದಿಯನ್ನು ನೀಡಿರುತ್ತೇನೆ. ತನಿಖಾಧಿಕಾರಿಯು ನೀಡಿದ ಜ್ಞಾಪನವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-110 ಎಂದು ಸಾಕ್ಷಿಯ ಸಹಿಯನ್ನು ನಿಪಿ-110(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-111 ಎಂದು, ಸಾಕ್ಷಿಯ ಸಹಿಯನ್ನು ನಿಪಿ-111(ಎ) ಎಂದು ಗುರುತಿಸಲಾಯಿತು.

2. ನಂತರ ದಿ.15-05-2021 ರಂದು ತನಿಖಾಧಿಕಾರಿಯಾದ ಚಾಸಾ-39 ರವರು ನನಗೆ ನಮ್ಮ ಠಾಣೆಯಲ್ಲಿ ಈ ಹಿಂದೆ ದಾಖಲಾಗಿದ್ದ ಠಾಣಾ ಗುನ್ನಾ ನಂ.119/2021 ರ ಪ್ರಥಮ

ವರ್ತಮಾನ ವರದಿ ಹಾಗೂ ದೂರಿನ ಪ್ರತಿಗಳನ್ನು ನೀಡುವಂತೆ ಜ್ಞಾಪನ ನೀಡಿರುತ್ತಾರೆ. ಅದರಂತೆ ನಾನು ನಮ್ಮ ಠಾಣೆಯ ದಾಖಲೆಗಳನ್ನು ಪರಿಶೀಲಿಸಿ, ದಿ.17-05-2021 ರಂದು ಸದರಿ ಗುನ್ನಾ ನಂ.119/2021 ರ ಪ್ರಥಮ ವರ್ತಮಾನ ವರದಿ ಹಾಗೂ ದೂರಿನ ಪ್ರತಿಯನ್ನು ವರದಿಯೊಂದಿಗೆ ನೀಡಿರುತ್ತೇನೆ. ಚಾಸಾ-39 ರವರು ನೀಡಿದ ಜ್ಞಾಪನವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-112 ಎಂದು, ಸಾಕ್ಷಿಯ ಸಹಿಯನ್ನು ನಿಪಿ-112(ಎ) ಎಂದು ಗುರುತಿಸಲಾಯಿತು. ಗುನ್ನಾ ನಂ.119/2021 ರ ಪ್ರಥಮ ವರ್ತಮಾನ ವರದಿ ಹಾಗೂ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಪ್ರ.ವ. ವರದಿಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-113 ಎಂದು, ಸಾಕ್ಷಿಯ ಸಹಿಯನ್ನು ನಿಪಿ-113(ಎ) ಎಂದು ಗುರುತಿಸಲಾಯಿತು. ವಿ.ಸಿ.ಯ ಮೂಲಕ ಕಾಣುತ್ತಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ-**

3. ತನಿಖಾಧಿಕಾರಿಯು ಆರೋಪಿಯ ಪತ್ತೆಗಾಗಿ ನನಗೆ ನೀಡಿದ ಜ್ಞಾಪನದೊಂದಿಗೆ ಆತನ ಚಹರೆಗೆ ಸಂಬಂಧಿಸಿದಂತೆ ಯಾವುದೇ ಫೋಟೊ ನೀಡಿರುವುದಿಲ್ಲ, ಆದರೆ ಆರೋಪಿಯು ನಮ್ಮ ಠಾಣಾ ವ್ಯಾಪ್ತಿಯ ವಾಸಿಯಾಗಿದ್ದರಿಂದ, ಆತನ ಬಗ್ಗೆ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯನ್ನು ಆತನ ಮನೆಯಲ್ಲಿಯೇ ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗೆ ಗುನ್ನಾ ನಂ.119/2021 ಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರ.ವ. ವರದಿಯನ್ನು ಹಾಗೂ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರ.ವ. ವರದಿ ಹಾಗೂ ದೂರನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿ, ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ